7

# ನಮ್ಮ ಜೀವಿತದಲ್ಲಿ ದೇವರ ಚಿತ್ತ

## (1 ಥೆಸಲೊನೀಕ 4:1-8)

ದೇವರ ವಾಕ್ಯದ ಆಧಾರದಿಂದ, ನಾವುಗಳು ದೇವರ ಮನಸ್ಸನ್ನು ತಿಳಿಯುವ ಅವಕಾಶವನ್ನು ಹೊಂದಿರುವೆವು ದೇವರ ಆಲೋಚನೆಯನ್ನು ಸಹ ತಿಳಿಯಬಹುದು. ದೇವರು ನಮ್ಮ ಜೀವಿತದಲ್ಲಿ ಇಟ್ಟಿರುವ ದೃಷ್ಟಿಕೋನವನ್ನು ಸಹ ತಿಳಿಯಬಹುದು. ನಮ್ಮಿಂದ ಆತನು ಏನನ್ನು ಬಯಸುವನು? ಈ ಪ್ರಶ್ನೆಗೆ ಮೊದಲನೆ ಥೆಸಲೊನೀಕ 4ನೇ ಅಧ್ಯಾಯವು ಉತ್ತರವನ್ನು ನೀಡುತ್ತದೆ.

ಈ ಪತ್ರಿಕೆಯ ಕಳೆದ ಮೂರು ಅಧ್ಯಾಯಗಳಲ್ಲಿ, ಅನಂದವಾದ ವರ್ತಮಾನದ ಬಗ್ಗೆ ಪೌಲನು ತಿಳಿಸಿ, ಥೆಸಲೊನೀಕದವರಿಗೆ ಪೌಲನು ಪ್ರಸಂಗಿಸಿದ ಸುವಾರ್ತೆಯ ವಿಧವನ್ನು ಹಾಗೂ ಥೆಸಲೊನೀಕದವರ ಪ್ರತಿಕ್ರಿಯೆ ಹಾಗೂ ಅವರ ಮೂಲಕ ಕ್ರೈಸ್ತರಾದ ವರ ಪ್ರತಿಕ್ರಿಯೆಯ ಕುರಿತು ಮುಂದುವರಿಸಿರುವನು. ನಂಬಿಕೆ ಹಾಗೂ ಪ್ರೀತಿಯಲ್ಲಿ ವೃದ್ಧಿ ಹೊಂದುವ ಸಮಯವು ಪ್ರಾಪ್ತವಾಗಿತ್ತು, ಹಿಂಸೆಯ ನಡುವೆಯು ವೃದ್ಧಿವುಂಟಾಗಿತ್ತು. ಈ ಕ್ರೈಸ್ತರ ಪ್ರಗತಿಯು, ಅವರ ಬೋಧಕರುಗಳಿಗೆ ಆನಂದ ಮತ್ತು ಆಧರಣೆಯ ಮೂಲವಾಗಿತ್ತು, ಮುಂದೆ ಅವರ ಪ್ರಗತಿಯು ಸಾಧನೆಯಲ್ಲಿ, ಹೊಸ ಕ್ರೈಸ್ತರು ಅನುಸರಿಸಬೇಕಾಗಿದ್ದ ನೀತಿ ನಿಯಮಗಳ ಪ್ರಾಮುಖ್ಯತೆಯನ್ನು ಅರಿಯಲು ಪೌಲನು ಬಯಸಿದನು.

4:1-8ರಲ್ಲಿ ಪರಿಶುದ್ಧತೆಯ ಪ್ರಸ್ತಾಪವನ್ನು ಮಾಡಲಾಗಿದೆ. ಪರಿಶುದ್ಧತೆಯು, ಕ್ರೈಸ್ತರ ವೃದ್ಧಿಯ ಪ್ರಮುಖ ಅಂಶವಾಗಿದೆ, ಅವರು ಆರಾಧಿಸುತ್ತಿದ್ದ ದೇವರಲ್ಲಿ ಇದ್ದಂತ ಪರಿಶುದ್ಧ ತೆಯನ್ನು ಥೆಸಲೊನೀಕವದರು ತಮ್ಮ ಜೀವಿತದಲ್ಲಿ ಪ್ರಕಟಿಸಬೇಕಿತ್ತು. ಅನ್ಯಜನಾಂಗದವರು, ಆರಾಧಿಸುತ್ತಿದ್ದ ಅನ್ಯ ದೇವರುಗಳ ಚಿತ್ತವನ್ನು ಪ್ರಕಟಮಾಡುತ್ತಿದ್ದರು. ಒಂದು ವೇಳೆ ಅನ್ಯ ಸಮೂಹದವರು ಸತ್ಯದೇವರನ್ನು ಅರಿಯಬೇಕಿದ್ದರೆ, ಕ್ರೈಸ್ತರು ತಮ್ಮ ಜೀವಿತದಲ್ಲಿ ಪರಿಶುದ್ಧ ದೇವರ ಚಿತ್ರಣವನ್ನು ಪ್ರಕಟಿಸಬೇಕಿತ್ತು.

### ನಮಗಾಗಿ, ದೇವರ ಪಾತ್ರವನ್ನು ಹುಡುಕಿಕೊಳ್ಳೋಣ! (4:1)

4:1ರಲ್ಲಿ ಪೌಲನು, "ಮನವಿಯನ್ನು ಹಾಗೂ ಎಚ್ಚರಿಕೆಯನ್ನು" ನೀಡುತ್ತಿರುವನು, ಅಥವಾ ತನ್ನ ಓದುಗರೊಂದಿಗೆ ಬೇಡುತ್ತಾ ಮತ್ತು ಅಂಗಲಾಚುತ್ತಾ ಇರುವನು. ಇದನ್ನು ಇತರೆ ಹೊಸ ಒಡಂಬಡಿಕೆಯ ಪತ್ರಿಕೆಗಳಲ್ಲೂ ಗಮನಿಸುತ್ತೇವೆ. ಇದು ನಮ್ಮನ್ನು ವಿಶೇಷವಾದ ಮನವಿಯ ಕಡೆಗೆ ಸೆಳೆಯುತ್ತದೆ, ಇದು ಬರವಣಿಗೆಯ ಒಂದು ಮುಖ್ಯ ಅಂಶವಾಗಿರುತ್ತದೆ. ನಾವು ಪತ್ರಗಳನ್ನು ಬರೆಯುವಾಗ, ಅನೇಕ ಮಹತ್ವದ ಸಂಗತಿಗಳನ್ನು ಹೊಂದಿರುತ್ತೇನೆ, ಆದರೆ ಬರೆಯಲು ಪ್ರಮುಖವಾದ ಒಂದು ವಿಷಯವು ಇರುತ್ತದೆ, ಅದನ್ನು ಹೊಂದುವವನು, ಆ ಕ್ರಿಯೆಯನ್ನು ಮಾಡಲೇಬೇಕೆಂಬ ಮನವಿ ಇರುತ್ತದೆ. ಅದೇ ರೀತಿಯಲ್ಲಿ, ಹೊಸ ಒಡಂಬಡಿಕೆಯಲ್ಲಿ ಒಳಗೊಂಡಿರುವ ಪ್ರಮುಖ ಸಂದೇಶಗಳಲ್ಲಿ, ಕಾರ್ಯಗತ ಮಾಡಬೇಕಾದ ಅತಿ ಪ್ರಾಮುಖ್ಯವಾದ ಒಂದು ಸಂಗತಿ ಇರುತ್ತದೆ, ಅದನ್ನು "ನಾನು ಬೇಡಿಕೊಳ್ಳುವೆನು," ಎಂಬ ವ್ಯಾಖ್ಯಾನದಿಂದ "ಮನವಿ ಮಾಡಲಾಗಿರುತ್ತದೆ," "ನಾವು ಭಿನ್ನವಿಸುತ್ತೇವೆ," ಅಥವಾ "ನಾನು ನಿನ್ನಲ್ಲಿ ಅಂಗಲಾಚುತ್ತೇನೆ" ಎಂದಿರುತ್ತದೆ. ಈ ವಿಷಯವು ಪತ್ರಿಕೆಯ ಬಹುಮುಖ್ಯವಾದ ಭಾಗವಾಗಿರುತ್ತದೆ.

ಸಭೆಯವರು ಏನು ಮಾಡಬೇಕೆಂದು ಪೌಲನು ಬೇಡಿಕೊಳ್ಳುತ್ತಿರುವನು? "ನೀವು ಅದರಂತೆ ನಡೆಯುತ್ತಲೇ ಇರಬೇಕು" (ವಚನ 4:1). ನೀವು ನಡೆದು ದೇವರನ್ನು ಮೆಚ್ಚಿಸ ಬೇಕು ಎಂದರೆ ಅವರು ತಮ್ಮ ಕಾರ್ಯವನ್ನು ಸರಿಯಾಗಿ ಮಾಡುತ್ತಿರಲಿಲ್ಲ ಎಂಬ ಅರ್ಥವೇ? ಎಂದಿಗೂ ಇಲ್ಲ! ಅವರು ಈಗಾಗಲೇ ಒಳ್ಳೆಯದನ್ನು ಮಾಡುತ್ತಿದ್ದರು ಎಂದು ತಿಳಿಸಲಾಗಿದೆ. ಅವರು ಮಾಡುತ್ತಿದ್ದ ಕಾರ್ಯಗಳನ್ನೆ ಮುಂದುವರಿಸಬೇಕೆಂದು ಈ ಪತ್ರಿಕೆಯಲ್ಲಿ ಅನೇಕ ಸಾರಿ ತಿಳಿಸಲಾಗಿದೆ. 4:9, 10ರಲ್ಲಿ ಅವರು ಪ್ರೀತಿಸಬೇಕೆಂದು ಪ್ರಬೋಧಿಸಿ, ಅದರಲ್ಲಿ ಮುಂದುವರಿಯಬೇಕೆಂದು ಹೇಳಿದನು; 5:11ರಲ್ಲಿ ಆದದ್ದರಿಂದ ನೀವು ಮಾಡುತ್ತಿರುವ ಪ್ರಕಾರವೇ ಒಬ್ಬರನ್ನೊಬ್ಬರು ಸಂತೈಸಿಕೊಳ್ಳುತ್ತಾ ಒಬ್ಬರ ಭಕ್ತಿಯನ್ನೊಬ್ಬರು ವೃದ್ಧಿಪಡಿಸುತ್ತಾ ಇರ್ರಿ ಅಂದನು.

ಕೆಲವು ಸಾರಿ ತಪ್ಪಾದ ವಿಷಯಗಳ ಕುರಿತು ಬೋಧಿಸಲ್ಪಟ್ಟು, ತಪ್ಪಾಗುತ್ತಿರುವದನ್ನು ಸರಿಪಡಿಸಿಕೊಳ್ಳುವ ಬಗ್ಗೆ ಪ್ರಬೋಧನೆಯನ್ನು ಹೊಂದುತ್ತೇವೆ. ಉತ್ತಮವಾಗಿ ಮಾಡುತ್ತಿದ್ದ ಜನರು ಇನ್ನು ಉತ್ತಮವಾಗಿ ಮೂರು ಸಂಗತಿಗಳನ್ನು ಮಾಡಬೇಕೆಂದು ಈ ಭಾಗದಲ್ಲಿ ತಿಳಿಸಲಾಗಿದೆ. ಒಬ್ಬ ಓಟಗಾರನಿಗೆ ತನ್ನ ಸಾಮರ್ಥ್ಯವನ್ನು ವೃದ್ಧಿ ಪಡಿಸಿಕೊಳ್ಳುವ ಕುರಿತು ಪ್ರೋತ್ಸಾಹ ನೀಡಿದ ಹಾಗೆ, ಅವನು ಉತ್ತಮವಾಗಿ ಮಾಡುವನು ಎಂದು ತಿಳಿದು ಉತ್ತೇಜನ ಮಾಡುವದು. ಅದೇ ರೀತಿಯಲ್ಲಿ, ಥೆಸಲೊನೀಕದವರು ದೇವರ ಸೇವೆಯನ್ನು ಇನ್ನೂ ಉತ್ತಮವಾಗಿ ಮಾಡಲು ಸಾಮರ್ಥ್ಯ ಹೊಂದಿದ್ದರು ಎಂದು ಅವರನ್ನು ಪ್ರೋತ್ಸಾಹ ಮಾಡಲಾಗಿದೆ.

ಕೇವಲ ತಪ್ಪಾದ ವಿಷಯಗಳು ಮಾಡದಂತೆ ಮಾಡಲು ಪ್ರಯತ್ನಿಸುತ್ತಿರದೆ, ನಮ್ಮಲ್ಲಿರುವಂತ ವರದಾನಗಳನ್ನು ವೃದ್ಧಿಪಡಿಸಿಕೊಳ್ಳಲು ಮುಂದಾಗಬೇಕು. ಬೋಧಕರಾಗಿ, ಸಲಹೆಗಾರರಾಗಿ, ಪೋಷಕರಾಗಿ ಸಾಮರ್ಥ್ಯವನ್ನು ಅಭಿವೃದ್ಧಿ ಪಡಿಸುವ ಬಗ್ಗೆ ಮಾತನಾಡದೆ, ತಪ್ಪುಗಳನ್ನು ಸರಿಪಡಿಸಿಕೊಳ್ಳುವ ಬಗ್ಗೆಯೇ ಬೋಧಿಸುತ್ತಿರುತ್ತೇವೆ. ನಮ್ಮ ಸಹೋದರರಲ್ಲೂ, ವಿದ್ಯಾರ್ಥಿಗಳಲ್ಲೂ, ಮಕ್ಕಳಲ್ಲೂ, ಇರುವ ಒಳ್ಳೆಕಾರ್ಯಗಳನ್ನು ಮತ್ತು ತಲಾಂತುಗಳನ್ನೂ ಅಭಿವೃದ್ಧಿ ಪಡಿಸುವ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳ ಬೇಕೆಂದು ಬೋಧಿಸಬೇಕು. ಆ ಕ್ಷೇತ್ರ ಗಳಲ್ಲಿ ಅವರುಗಳು ಉತ್ತಮವಾಗಿ ಮಾಡಲು ಉತ್ತೇಜಿತ ಬೇಕು! ಅವರ ದೇವರೊಂದಿಗಿನ ಒಳ್ಳೆ ಕಾರ್ಯಗಳ ನಿಮಿತ್ತ ಪ್ರಬೋಧಿಸಿ ಎಚ್ಚರಿಸಿದ ನಂತರ, ಅವರು ದೇವರೊಂದಿಗಿನ ಸಂಬಂಧದಲ್ಲಿ ಮುಂದುವರಿಯುವಂತೆ, ಪತ್ರಿಕೆಯ ಇನ್ನೊಂದು ಭಾಗವನ್ನು ಪೌಲನು ಬರೆದಿರುವನು.

ಅವರ ಜೀವಿತದಲ್ಲಿ, ಅವರು ಯಾವ ರೀತಿಯಲ್ಲಿ ನಡೆಯಬೇಕಿತ್ತು? ದೇವರನ್ನು ಮೆಚ್ಚಿಸುವದಕ್ಕೆ ಮಾತ್ರ! ಎಫೆಸದವರಿಗೆ, "ಕರ್ತನಿಗೆ ಮೆಚ್ಚಿಗೆಯಾದದ್ದು ಏನೆಂಬುದನ್ನು ಪರಿಶೋಧಿಸಿ ತಿಳುಕೊಳ್ಳಿರಿ" ಎಂದು ಹೇಳಲಾಯಿತು (ಎಫೆಸ 5:10). ನಮ್ಮ ಗುರಿಯು ಇದೇ ಆಗಿರಬೇಕು. ನಾವು ಬಯಸಿದಂತೆ ಮಾಡುವದು, ಸ್ವಾಭಾವಿಕವಾದದ್ದನ್ನು ಮಾಡುವದು, ನಮ್ಮ ಮನಸ್ಸಾಕ್ಷಿಯಂತೆಯೇ ಮಾಡುವದು, ಯಾವಾಗಲೂ ದೇವರನ್ನು ಮೆಚ್ಚಿಸಲಾರದು. ದೇವರು ಬಯಸಿದ್ದನ್ನು ಮತ್ತು ಆತನ ನಿಯಮಗಳಂತೆಯೇ ಮಾಡ ಬೇಕು. ದೇವರ ವಾಕ್ಯಕ್ಕೆ ವಿಧೇಯರಾಗಿ, ಆತನು ಮೆಚ್ಚುವದನ್ನೇ ಮಾಡೋಣ! ಅದು ನಮ್ಮ ಜೀವಿತದ ಪಾತ್ರವಾ ಗಿರಲಿ!

## ದೇವರ ನಿಯಮಗಳನ್ನು ನೆನಪು ಮಾಡಿಕೊಳ್ಳಿರಿ (4:2)

ಥೆಸಲೊನೀಕದ ಕ್ರೈಸ್ತರು ಈಗಾಗಲೇ ಕಲಿತಿರುವದನ್ನು ನೆನಪು ಮಾಡಬೇಕೆಂದು ಕೇಳಿ ಕೊಳ್ಳಲಾಯಿತು. ಆ ವಿಷಯದ ಕುರಿತು ಮುಂದೆ ನೋಡಲಾಗುವದು, ಆದರೆ ಅವರು ಈಗಾಗಲೇ ಕಲಿತಿರುವದನ್ನು ಮರೆಯಬಾರದು ಎಂಬುದೇ ಮುಖ್ಯ ಸಾರಾಂಶವಾಗಿದೆ (4:2).

ಎಷ್ಟೋ ಸಾರಿ ನಾವುಗಳು ಕಲಿತಿರುವದನ್ನು ಬೇಗನೆ ಮರೆತುಬಿಡುತ್ತೇವೆ! ಅದಕ್ಕೆ ಅನೇಕ ಕಾರಣಗಳನ್ನು ನಾವು ನೀಡುತ್ತೇವೆ. ಬೋಧನೆಗಳನ್ನು ಅರ್ಥಮಾಡಿಕೊಳ್ಳುವದು ಕಷ್ಟಕರವಾಗಿರುತ್ತದೆ; ಬಹುಶಃ ಅದನ್ನು ಒಪ್ಪಿಕೊಳ್ಳಲು ಹಿಂಜರಿಯುತ್ತೇವೆ; ಬಹುಶಃ ಅದರ ಅಗತ್ಯತೆ ಇಲ್ಲವೆಂದು ತಿಳಿಯುತ್ತೇವೆ; ಅಥವಾ ಅದನ್ನು ಕ್ರಿಯೆಯಲ್ಲಿ ತರಲು ಸೋಮಾರಿಗಳಾಗಿರುತ್ತೇವೆ. ಅನೇಕ ಸಾರಿ ಪೂರ್ಣವಾದ ಸತ್ಯವನ್ನು ಅರಿತು ಅದನ್ನು ಪೂರ್ಣವಾಗಿ ಕ್ರಿಯೆಗೆ ತರಬೇಕು ಎಂದು ತಿಳಿಯುತ್ತೇವೆ.

ಕಾರಣಗಳು ಏನೇ ಇರಬಹುದು, ದೇವರ ಬೆಲೆಯುಳ್ಳ ವಾಕ್ಯಗಳನ್ನು ಕೇಳಿ, ಅದನ್ನು ಕ್ರಿಯೆಯಲ್ಲಿ ತರಲು ಅಲಕ್ಷ್ಯಮಾಡಿದರೆ, ಅದು ಎಂಥಾ ಒಂದು ವ್ಯರ್ಥಕಾರ್ಯವಾಗಿರುತ್ತದೆ! ಒಂದು ವೇಳೆ ಆ ಸಂಗತಿಗಳು ಸಂಭವಿಸುವುದಾದರೆ, ಬೋಧಕರುಗಳಾದ ನಾವುಗಳು ಅದನ್ನು ಕ್ರಿಯೆಯಲ್ಲಿ ತರಲು ನೆನಪಿಸಬೇಕಾಗುತ್ತದೆ. ದೇವರು ಹೇಳು ವಂತದ್ದನ್ನು ಕೇಳುವದನ್ನು ಮುಂದವರಿಸಿ - ಅದನ್ನೆ ಮಾಡೋಣ!

## ಹಾದರದಿಂದ ದೂರವಾಗಿರ್ರಿ (4:3)

ವಚನ 3ರಲ್ಲಿ ಪರಿಶುದ್ಧತೆ ಮತ್ತು "ಕಾಮದ ಹಾದರದ" ನಡುವೆ ಇರುವ ವ್ಯತ್ಯಾಸವನ್ನು ನೋಡುತ್ತೇವೆ. ಪರಿಶುದ್ಧನಾದವನು ದೇವರ ಕಾರ್ಯಕ್ಕೆ ಮೀಸಲಾಗಿರುವನು, ದೇವರನ್ನು ಮೆಚ್ಚಿಸುವದಕ್ಕೆ ಪ್ರಯತ್ನಿಸುವನು. ಹಾದರದ ಮನುಷ್ಯನು ತನ್ನ ಅಭಿಲಾಷೆಗಳನ್ನೇ ಪೂರೈಸಿಕೊಳ್ಳುವನು. ಪರಿಶುದ್ಧನಾದ ಮನುಷ್ಯನು, ದೇವರ ವಿಶೇಷವಾದ ಕಾರ್ಯಕ್ಕೆ ಮೀಸಲಾಗಿರುವನು ಎಂದು ವಿವರಿಸಲಾಗಿದೆ. ಇದನ್ನು ಸತ್ಯವೇದದಲ್ಲಿ "ಶುದ್ಧವಾದದ್ದು" ಎಂದು ವಿವರಿಸಲಾಗಿದೆ. ದೇವ ಜನರು ದೇವರ ಕಾರ್ಯಕ್ಕಾಗಿ ಪ್ರತ್ಯೇಕವಾದವರು ಎಂದು ವಿವರಿಸಿದ ನಂತರ, ಅವರು "ಪರಿಶುದ್ಧ ಜನರು," "ದೇವಜನರು," ಮತ್ತು "ಶುದ್ಧರು" ಎಂಬುದು, ಗ್ರೀಕ್ ಮೂಲ ಪದದ ಅಂಶವಾಗಿರುತ್ತದೆ.

ಕೆಲವು ವಸ್ತುಗಳನ್ನು ಮುಖ್ಯವಾದ ಕಾರ್ಯಗಳಿಗಾಗಿ ಬಳಸುತ್ತೇವೆ. ಮೇಜಿನ ಮೇಲೆ ಬಳಸುವ ಬಟ್ಟೆಯು ಮೇಜಿಗೆ ಮೀಸಲಾಗಿರುತ್ತದೆ. ಅದನ್ನು ನಾವು ಪಾದರಕ್ಷೆಗಳನ್ನು ಅಥವಾ ನೆಲವನ್ನು ಸ್ವಚ್ಛಮಾಡಲು ಬಳಸುವದಿಲ್ಲ; ಅದೇ ರೀತಿಯಾಗಿ, ನಾವುಗಳು ದೇವರು ನೇಮಕ ಮಾಡಿರುವ ಕಾರ್ಯಗಳಿಗೆ ಮೀಸಲಾಗಿದ್ದೇವೆ. ಹಾಗೂ ನಮ್ಮ ಲೈಂಗಿಕ ಕಾರ್ಯವು ದಾಂಪತ್ಯದ ಜೀವಿತಕ್ಕೆ - ಮೀಸಲಾಗಿದೆ.

ಕೆಲವರು ಲೈಂಗಿಕ ಕಾರ್ಯವು ತಪ್ಪು ಎಂದು ತಿಳಿದು, ಒಂಟಿಯಾಗಿರುವದು ಪರಿಶುದ್ಧವಾದದ್ದು ಎಂದು ಭಾವಿಸುತ್ತಾರೆ. ಈ ಕಾರಣದಿಂದ, ಕೆಲವರು ಅಥವಾ ಎಲ್ಲರೂ ಮದುವೆಯನ್ನು ನಿರಾಕರಿಸುತ್ತಾರೆ. "ಮದುವೆಯನ್ನು ಆಗಬಾರದೆಂದು" (1 ತಿಮೊಥೆ 4:1-3). ಹೇಳುವವರು ನಂಬಿಕೆಯಿಲ್ಲದೆ ಹಿಂಜರಿದವರು ಎಂದು ದೇವರ ವಾಕ್ಯವು ಉಪದೇಶಿಸುತ್ತದೆ. ಇದರ ಕುರಿತ ಬೋಧನೆ ಏನೆಂದರೆ, "ದಾಂಪತ್ಯವು ಮಾನ್ಯವಾದದ್ದೆಂದು ಎಲ್ಲರೂ ಎಣಿಸಬೇಕು; ಗಂಡ ಹೆಂಡರ ಸಂಬಂಧವು ನಿಷ್ಕಳಂಕವಾಗಿರಬೇಕು. ಜಾರರಿಗೂ ವ್ಯಭಿಚಾರಿಗಳಿಗೂ ದೇವರು ನ್ಯಾಯತೀರಿಸುವನು ತಿಳುಕೊಳ್ಳಿರಿ" (ಇಬ್ರಿಯ 13:4). ಲೈಂಗಿಕ ಸಂಬಂಧವನ್ನು ಮದುವೆಯ ಸಂಬಂಧದಲ್ಲಿ ಬೆಲೆಯುಳ್ಳದ್ದು ಮತ್ತು ಗೌರವಯುತವಾದದ್ದು ಎಂದು ಪರಿಗಣಿಸಲಾಗಿದೆ, ನಾವು ದೇವರು ಮೆಚ್ಚುವಂತ ಮಾರ್ಗಕ್ಕೆ ಸಮರ್ಪಿಸಿಕೊಂಡವರಾಗಿದ್ದೇವೆ.

## ಪರಿಶುದ್ಧರಾಗಿರುವದನ್ನು ಕಲಿತುಕೊಳ್ಳಿರಿ (4:4)

ನಮ್ಮ ದೇಹಗಳನ್ನು ಸರಿಯಾದ ರೀತಿಯಲ್ಲಿ, ಸರಿಯಾದ ಉದ್ದೇಶಕ್ಕಾಗಿ ಬಳಸುವದು "ಸ್ವಾಭಾವಿಕ ಕ್ರಿಯೆಯಲ್ಲಿ" ಅದನ್ನು ಬಳಸುವ ವಿಧವನ್ನು ನಾವು ಕಲಿಯಬೇಕು (4:4). ವಚನ 4ರಲ್ಲಿ ಬಳಸಲಾಗಿರುವ ಪದವು ವೈಯಕ್ತಿಕವಾದ ಪಾತ್ರೆ ಎಂಬುದಾಗಿದೆ. 2 ಕೊರಿಂಥ

4:7ರಲ್ಲಿರುವಂತೆ, ಅಥವಾ 1 ಪೇತ್ರ 3:7ರಲ್ಲಿರುವ ಪತ್ನಿಯ ದೇಹದಂತೆ ಏನೇ ಆಗಿದ್ದರು; ನಮ್ಮ ದೇಹಗಳನ್ನು ಬಳಸುವ ಕುರಿತಾಗಿಯೇ ಚರ್ಚಿಸಲಾಗಿದೆ.

ದೇವರನ್ನು ಗೌರವಿಸುವಂತ ಬಳಕೆಗೆ ನಮ್ಮ ದೇಹಗಳನ್ನು ಪ್ರತ್ಯೇಕ ಮಾಡುವಾಗ, ದೇವರ ನಿಯಮಗಳನ್ನೆ ಅನುಸರಣೆ ಮಾಡಬೇಕು, ಕೆಲವರು ತಮ್ಮ ಇಚ್ಛಾನುಸಾರ ಲೈಂಗಿಕ ಕ್ರಿಯೆಯಲ್ಲಿ ತೊಡಗಿಸಿಕೊಳ್ಳುತ್ತಾರೆ, ಇತರರಂತೆ ಅನುಸರಿಸುತ್ತಾರೆ ಅಥವಾ ಸಮೂಹದಲ್ಲಿರುವ ಮನೋಭಾವನೆಯನ್ನೆ ಹೊಂದಿರುತ್ತಾರೆ. ನಮ್ಮ ಇಷ್ಟ ಬಂದಂತೆ ಅಥವಾ ಇತರರ ರೀತಿಯಂತೆ ಅನುಸರಿಸುವವರಾದರೆ, ನಾವು ದೇವರ ನಿಯಮಗಳಿಗೆ ವಿರೋಧ ವಾಗಿರುವವರಾಗುತ್ತೇವೆ. ನಮ್ಮ ಆಶೆಗಳನ್ನು ಹತೋಟಿಯಲ್ಲಿಡಬೇಕಾದರೂ ಅಥವಾ ಬದಲಾಯಿಸಬೇಕಾದರೂ, ದೇವರ ನಿಯಮಗಳನ್ನೇ ಪಾಲಿಸಬೇಕು, ಒಂದು ವೇಳೆ ಅದು ಇತರರಿಗೆ ವಿರೋಧವಾದರೂ ಅಥವಾ ಅವರು ಅದನ್ನು ಒಪ್ಪಿಕೊಳ್ಳದಿದ್ದರೂ, ದೇವರ ನಿಯಮವನ್ನೇ, ಪಾಲಿಸಬೇಕು.

## ದೇಹದ ಆಶೆಗಳಿಂದ ದೂರವಾಗಿರ್ರಿ (4:5)

ಯಾವ ಸಂಗತಿಗಳು ಜನರನ್ನು ಕಾಮಾಭಿಲಾಶೆಗೆ ನಡೆಸುತ್ತದೆ? ಈ ಆಶೆಯನ್ನು ಸತ್ಯವೇದವು "ದುರಾಶೆ" ಎಂದು ಕರೆಯುತ್ತದೆ. ಮತ್ತು ಕಾಮದ ಆಶೆ ಎಂದು ತಿಳಿಸುತ್ತದೆ. ಒಂದು ವೇಳೆ ಇದು ನಮ್ಮ ಕ್ರಿಯೆಗೆ ಹಿನ್ನೆಲೆಯಾಗುವದಾದರೆ, ನಾವು ನಮ್ಮ ಆಶೆಗಳನ್ನು ಅನುಸರಿಸುತ್ತೇವೆ ವಿನಃ ದೇವರ ಚಿತ್ತವನ್ನಲ್ಲ (4:5). ಅನ್ಯರು ತಮ್ಮ ಆಶೆಗಳನ್ನು ಪೂರೈಸಿ ಕೊಳ್ಳಲು ಕಾಮದ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡರು. ಅದನ್ನು ಅವರು ತಮ್ಮ ಆರಾ ಧನೆಯ ಒಂದು ಭಾಗವನ್ನಾಗಿ ಮಾಡಿಕೊಂಡು ದೇವಾಲಯದ ಪೂಜೆಗೆ ಬರುವವರಿಗೆ ಅನುಕೂಲವಾಗಲೆಂದು ವೇಶ್ಯೆಯರನ್ನು ನೇಮಿಸಿಕೊಂಡರು. ಅನ್ಯರು ತಮ್ಮ ದೇವರುಗಳು ಅವರಂತೆಯೇ ಎಂದು ಭಾವಿಸಿದರು; ಆ ದೇವರುಗಳು ಒಂದು ಗುಂಪಾಗಿ ಪ್ರೀತಿಗಾಗಿ ಹೋರಾಡಿ, ಮನುಷ್ಯರಂತೆ ಪರಸ್ಪರ ಮೋಸಪಡಿಸಿಕೊಂಡರು. ಆ ಜನರು ತಮ್ಮ ದೇವರುಗಳನ್ನು ಅನುಸರಿಸುವದರಿಂದ - ಅವರನ್ನು ಮೆಚ್ಚಿಸುವವರಾದರು ಎಂದು ಭಾವಿಸಿಕೊಂಡರು.

ಈ ಥೆಸಲೊನೀಕದವರು, "ವಿಗ್ರಹಗಳನ್ನು ಬಿಟ್ಟು ಬಿಟ್ಟು ಜೀವವುಳ್ಳ ಸತ್ಯ ದೇವರ ಕಡೆಗೆ ತಿರುಗಿಕೊಂಡಾಗ" (1:9), ಅವರು ದೇವರ ಬಯಕೆಯನ್ನು ಅರಿತುಕೊಂಡು ಮತ್ತು ಅದರ ಪ್ರಕಾರ ಕಾಮಾಭಿಲಾಷೆಗಳನ್ನು ಪರಿವರ್ತಿಸಿಕೊಳ್ಳಬೇಕಾಯಿತು. ನಿಜವಾದ ದೇವರನ್ನು ಆರಾಧಿಸುವಂತವರು, ನಮ್ಮ ಜೀವಿತದಲ್ಲಿ ದೇವರ ಚಿತ್ತವನ್ನೇ ಅನುಸರಿಸಬೇಕು.

ಕಾಮಾಭಿಲಾಶೆಯನ್ನು ಯಾವ ರೀತಿಯಲ್ಲಿ ಹತೋಟಿಯಲ್ಲಿಡಬಹುದು? ಯೌವನಸ್ತ ಪ್ರಸಂಗಿಯಾದ ತಿಮೊಥೆಯನಿಗೆ ಪೌಲನು, "ಒಬ್ಬನು ತನ್ನನ್ನು ಶುದ್ಧಪಡಿಸಿಕೊಂಡರೆ, ಅವನು ಉತ್ತಮವಾದ ಬಳಕೆಗೆ ಯೋಗ್ಯನಾಗಿರುವನು" ಎಂದು ಬರೆದಿರುವನು (2 ತಿಮೊಥೆ 2:21). ಮತ್ತು ಅವನನ್ನು ಎಚ್ಚರಿಸಿ "ನೀನು ಯೌವನದ ಇಚ್ಛೆಗಳಿಗೆ ದೂರವಾಗಿರು ನೀತಿ ವಿಶ್ವಾಸ ಪ್ರೀತಿ ಮತ್ತು ಸಮಾಧಾನವನ್ನು ಸಂಪಾದಿಸುವದಕ್ಕೆ ಶುದ್ಧ ಹೃದಯವುಳ್ಳವರಾಗಿ ಕರ್ತನನ್ನು ಬೇಡಿಕೊಳ್ಳುವವರ ಸಂಗಡ ಪ್ರಯಾಸಪಡು" (2 ತಿಮೊಥೆ 2:22).

ಕಾಮಾಭಿಲಾಶೆಯ ಸೆಳವಿಗೆ ಸಿಕ್ಕಿಕೊಳ್ಳದಂತೆ, ಈ ವಚನದಲ್ಲಿರುವ ಕೆಲವು ಅಂಶಗಳು ಸಹಾಯಿಸುತ್ತವೆ. ಮೊದಲನೆಯದಾಗಿ, ನೀವು ದೇವರ ಸೇವೆಯಲ್ಲಿ ಯೋಗ್ಯರು, ಪರಿಶುದ್ಧರು, ಮತ್ತು ಪ್ರಯೋಜನವುಳ್ಳವರು ಎಂದು ತಿಳಿದುಕೊಳ್ಳಿರಿ. ಆ ವಿಧದ ಜೀವಿತವೇ ನಿಮಗೆ ಅಗತ್ಯವಿದೆ ಎಂದು ದೃಢಪಡಿಸಿಕೊಳ್ಳಿರಿ. ಎರಡನೆಯದಾಗಿ, ಯೌವನದ ಇಚ್ಛೆಗಳು ನಿಮ್ಮನ್ನು ಹತೋಟಿಗೆ ತರುವಂತ ಸನ್ನಿವೇಶದಿಂದ "ತಪ್ಪಿಸಿಕೊಳ್ಳಿರಿ." ಮೂರನೇಯದಾಗಿ, ನೀತಿ, ವಿಶ್ವಾಸ, ಪ್ರೀತಿ ಮತ್ತು ಸಮಾಧಾನದ ಚಟುವಟಿಕೆಗಳಿಗೆ ನಿಮ್ಮನ್ನು ಒಳಪಡಿಸಿಕೊಳ್ಳಿರಿ. ನಾಲ್ಕನೆಯದಾಗಿ, ಈ ಸಂಗತಿಗಳನ್ನು ಸಂಪಾದಿಸುವದಕ್ಕೆ ಇಚ್ಛೆಯುಳ್ಳವರ ಸಂಗಡ

ಒಡನಾಟದಲ್ಲಿರಿ. ಅದನ್ನು ಮಾಡುವದಕ್ಕೆ ಈ ಸಂಗತಿಗಳು ಸಹಾಯಿಸುತ್ತವೆ.

## ನಿಮ್ಮ ಸಹೋದರನಿಗೆ ವಂಚಿಸಬೇಡಿರಿ (4:6)

ಕಮಾಭಿಲಾಶೆಯಲ್ಲಿ ತೊಡಗುವವನು, ದೇವರ ಚಿತ್ತಕ್ಕೆ ವಿರೋಧವಾಗಿರುವನು - ಮತ್ತು ಅವನು ತನ್ನ ಸಹೋದರನನ್ನು ವಂಚಿಸಿ, ತಪ್ಪು ಮಾಡುವವನಾಗಿರುವನು (ವಚನ 6). ಅವನು ಇತರರಿಗೆ ಅನ್ಯಾಯವಾದ ಅಪವಾದವನ್ನು ಮಾಡುವವನು. ಮದುವೆಯಾಗದೆ ಇರುವ ಯೌವನಸ್ತರ ನಡುವೆ ಉಂಟಾಗುವ ಅನೈತಿಕ ಸಂಬಂಧವನ್ನು - ಸತ್ಯವೇದವು ಅದನ್ನು ವ್ಯಭಿಚಾರ, ಸಲಿಂಗಕಾಮ ಎಂದು ಕರೆಯುತ್ತದೆ - ಅದು ಸರಿಯಾದದ್ದೆ, ಯಾಕಂದರೆ ಅದು ಕಳ್ಳತನಕ್ಕೂ ಮತ್ತು ಕೊಲೆಗೂ ಸಮಾನವಾಗಿದೆ, ಅದು ಯಾವುದೇ ಮನುಷ್ಯನ ಚಿತ್ತದಂತೆ ನಡೆಯದು. (ಅನೈತಿಕ ಎಂದು ಕರೆಸಿಕೊಳ್ಳುತ್ತದೆ, ಅದನ್ನು ಕೆಲವು ಸಾರಿ "ಅಪರಾಧಿ ರಹಿತ ಅಪರಾಧ" ಎಂದು ಕರೆಯಲಾಗಿದೆ.)

ಈ ಪಾಪದ ನಿಮಿತ್ತ ಇತರರು ಸಂಕಷ್ಟಕ್ಕೆ ಒಳಗಾಗುವರು, ಎಂದು ದೇವರ ವಾಕ್ಯ ಹೇಳುತ್ತದೆ. ಅದು ಸಹಜವಾಗಿ ಇನ್ನೊಬ್ಬನ ಮನಸ್ಸಾಕ್ಷಿಯನ್ನು ನಾಶಮಾಡುತ್ತದೆ. ಅದು ಅವನ ಕುಟುಂಬದಲ್ಲಿನ, ಸಂಬಂಧವನ್ನು ಮತ್ತು ಅವನ ದೇವರೊಂದಿಗಿನ ಸಂಬಂಧವನ್ನು ಹಾಳುಮಾಡುತ್ತದೆ. ಇದರ ಪರಿಣಾಮಗಳು ಕೆಟ್ಟದ್ದೆ, ಮತ್ತು ಅನೇಕ ವರ್ಷಗಳು ಉಳಿಯುತ್ತದೆ - ಬಹುಶಃ ಜೀವನ ಪರ್ಯಂತ.

ಮದುವೆಗೆ ಮೊದಲು, ಪರಸ್ಪರರು ಒಟ್ಟಾಗಿ ಜೀವಿಸಿ ಒಬ್ಬರನ್ನೊಬ್ಬರು ಅರಿತುಕೊಳ್ಳುವ ಪ್ರಯತ್ನವನ್ನು ಹಲವರು ಮಾಡುತ್ತಾರೆ, ಅವರಿಬ್ಬರು ದಾಂಪತ್ಯಕ್ಕೆ ಸರಿಹೊಂದುವರೋ ಎಂಬ ಪ್ರಯತ್ನ. ಅದು ಕೇವಲ ಸಮರ್ಪಣೆ ಇಲ್ಲದ ಕಾಮಕೂಟವಷ್ಟೇ - ಅದರಲ್ಲಿ ದೇವರಿಗಾಗಲೀ ಅಥವಾ ಪರಸ್ಪರರಿಗಾಗಲೀ ಸಮರ್ಪಣೆ ಇರುವದಿಲ್ಲ - ಅದು ಸಂಬಂಧವನ್ನು ಸುಭದ್ರಮಾಡುವದಿಲ್ಲ. ಇದು ದೇವರು ಬಯಸುವಂತ ಸುಭದ್ರ ಸಮರ್ಪಣೆ ಹಾಗೂ ದೇವರು ಒಪ್ಪುವಂತ ಸಂಬಂಧಕ್ಕೆ ವಿರೋಧವಾಗಿದೆ. ಪಾಪವು ಯಾವಾಗಲೂ ಇತರರಿಗೆ ನೋವನ್ನು ಉಂಟುಮಾಡುತ್ತದೆ. ಈ ವಿಧದಲ್ಲಿ ನಾವು ಇತರರನ್ನು ನಡೆಸಿಕೊಳ್ಳುವುದಾದರೆ ದೇವರ ನ್ಯಾಯತೀರ್ಪಿಗೆ ಒಳಗಾಗುತ್ತೇವೆ.

ಮದುವೆಯು ಗಂಡ ಹೆಂಡತಿಯರನ್ನು ತೊಂದರೆಗೆ ಈಡುಮಾಡುತ್ತದೆ ಎಂಬುದು ಕೆಲವರ ಅಭಿಪ್ರಾಯ, ಆದುದರಿಂದ ದಾಂಪತ್ಯ ಜೀವಿತಕ್ಕೆ ಸಮರ್ಪಿಸಿಕೊಳ್ಳಬಾರದು ಎಂಬುದು ಅವರ ವಾದ. ಥೆಸಲೊನೀಕದವರು ಕ್ರೈಸ್ತರಾಗಿ ಪರಿವರ್ತನೆಗೊಂಡಾಗ ಇದೇ ವಿಧವಾದ ವಾದವನ್ನು ಹೊಂದಿದ್ದರು, ಯಾಕಂದರೆ ಸುವಾರ್ತಾ ಪ್ರಸಂಗದ ನಿಮಿತ್ತ ಅವರು ಹಿಂಸೆಗೂ ಮತ್ತು ವಿರೋಧಕ್ಕೂ ಒಳಗಾಗಿದ್ದರು (1:6; 2:14-16).

ಪ್ರಶ್ನೆ ಏನೆಂದರೆ, "ಈ ಕ್ರಿಯೆಯು ಕಷ್ಟ ಮತ್ತು ಸಮಸ್ಯೆನ್ನು ಉಂಟು ಮಾಡುತ್ತದೆ ಯೇ?" ಮತ್ತು "ಈ ಕ್ರಿಯೆಯನ್ನು ದೇವರು ಮೆಚ್ಚುವನೇ?" ಒಂದು ವೇಳೆ ದೇವರು ಅದನ್ನು ಬಯಸುವದಾದರೆ ಅದನ್ನು ಮಾಡೋಣ - ಅದರ ಪರಿಣಾಮವು ಏನೇ ಇರಲಿ - ದೇವರು ನಮಗೆ ಸಹಾಯಕನು ಎಂದು ತಿಳಿದು ಆ ಪರಿಣಾಮಗಳನ್ನು ಸಹಿಸಿ, ಜಯಿಸೋಣ. "ಇದಲ್ಲದೆ ದೇವರ ಸಂಕಲ್ಪದ ಮೇರೆಗೆ ಕರೆಯಲ್ಪಟ್ಟು ಆತನನ್ನು ಪ್ರೀತಿಸುವವರ ಹಿತಕ್ಕಾಗಿ ಎಲ್ಲಾ ಕಾರ್ಯಗಳು ಅನುಕೂಲವಾಗುತ್ತದೆ ಎಂದು ನಮಗೂ ಗೊತ್ತದೆ, ..." (ರೋಮಾಪುರ 8:28).

## ದೇವರ ಪಕ್ಷದಲ್ಲಿರಲು ನಿರ್ಧರಿಸಿರಿ (4:7, 8)

ಒಂದು ಕಾರಣದಿಂದ ದೇವರು ನಮ್ಮನ್ನು ಕರೆದಿರುವನು. ದೇವರು ಯಾವ ರೀತಿ ಯಲ್ಲಿ ನಮ್ಮನ್ನು ಕರೆಯುವನು? ಯೇಸುವಿನ ಶುಭವರ್ತಮಾನದ ಮೂಲಕ ಕರೆ

ಯುವನು. 2 ಥೆಸಲೊನೀಕ 2:14 ದೇವರು ಮಾಡಿದ ವಿಷಯಗಳನ್ನು ತೋರಿಸಲಾಗಿದೆ: "... ನಮ್ಮ ಕರ್ತನಾದ ಯೇಸು ಕ್ರಿಸ್ತನ ಪ್ರಭಾವವನ್ನು ಸಂಪಾದಿಸಿಕೊಳ್ಳಬೇಕೆಂದು ದೇವರು ನಮ್ಮ ಸುವಾರ್ತೆಯ ಮೂಲಕವಾಗಿ ನಿಮ್ಮನ್ನು ಕರೆದನು." ದೇವರು ನಮ್ಮನ್ನು ಸುವಾರ್ತೆಯ ಮೂಲಕ ಕರೆದಿರುವದರಿಂದ, ದೇವರು ನಮ್ಮನ್ನು ಶಕುನ, ದರ್ಶನ, ಅಥವಾ ರಹಸ್ಯವಾದ ಸಂಕೇತಗಳ ಮೂಲಕವಾಗಿ ಕರೆದಿರುವದಿಲ್ಲ ಎಂಬ ಸೂಚನೆಯಾಗಿದೆ. ಸುವಾರ್ತೆಯ ಬದಲಾಗಿ ಯಾವುದೂ ಇರುವದಿಲ್ಲ.

ನಮ್ಮ ಲಾಭಕ್ಕಾಗಿಯೇ ದೇವರು ಕರೆದಿರುವನು. ಅವರಿಗಾಗಿ ದೇವರು ಹೊಂದಿರುವ ಯೋಜನೆಯ ಪ್ರಕಾರ ಕಾರ್ಯಗಳನ್ನು ಸಿದ್ಧಿಗೆ ತರುವನು - ನಾವೆಲ್ಲರು ಅದಕ್ಕೆ ಒಳಗಾಗಬೇಕು - ಅದು ಒಳ್ಳೆಯದಾದರೂ ಅಥವಾ ಕೆಟ್ಟದ್ದಾದರೂ ಅದನ್ನು ಒಪ್ಪಿಕೊಳ್ಳಬೇಕು. ಅನ್ಯರು ತಮ್ಮ ದೇವರುಗಳು ಕೆಲವು ಆಶೀರ್ವಾದವನ್ನು ನೀಡುವರೆಂದು ಭಾವಿಸಿ ಮತ್ತು ಅವುಗಳು ಶಕ್ತಿಯನ್ನು ಹೊಂದಿವೆ ಎಂದು ತಿಳಿದು ಅವುಗಳನ್ನು ಮೆಚ್ಚಿಸಿದರು.

ದೇವರು ನಮಗಾಗಿ ಯೋಜನೆಗಳನ್ನು ಹೊಂದಿರುವುದು, ನಮ್ಮ ಲಾಭಕ್ಕೆ, ಮತ್ತು ಅವುಗಳಿಂದ ನಮಗೆ ಆದಾಯ ಉಂಟಾಗುತ್ತದೆ, ದೇವರು ನಮಗೆ ಉತ್ತಮವಾದದ್ದನ್ನೆ ಮಾಡುವನು! ನಾವು ಆತನಿಗೆ ಪ್ರತಿಕ್ರಿಯೆ ನೀಡುವ ಮೊದಲೇ ನಮ್ಮನ್ನು ಆಶೀರ್ವದಿಸಿರುವನು, ಮತ್ತು ನಾವುಗಳು ಆತನ ನಿರಂತರ ಸ್ನೇಹಿತರಾಗಿರುವೆವು. "ಸ್ವಂತ ಮಗನನ್ನು ಉಳಿಸಿಕೊಳ್ಳದೆ ಆತನನ್ನು ನಮ್ಮೆಲ್ಲರಿಗೋಸ್ಕರ ಒಪ್ಪಿಸಿಕೊಟ್ಟನಲ್ಲಾ; ಮಗನನ್ನು ಕೊಟ್ಟ ಮೇಲೆ ಸಮಸ್ತವನ್ನು ನಮಗೆ ದಯಪಾಲಿಸದೆ ಇರುವನೆ?" (ರೋಮಾಪುರ 8:32). ನಾವು ಸೇವಿಸುವ ದೇವರು ಈ ವಿಧದಲ್ಲಿ ಇರುವನು - ಆತನು ಉದಾರಿಯಾದ ದೇವರು! ದೇವರು ನಮ್ಮಿಂದ ಏನನ್ನಾದರು ಬಯಸುವುದಾದರೆ, ಅದು ನಮ್ಮ ಲಾಭಕ್ಕಾಗಿಯೇ; ಆತನು ನಮಗಾಗಿ ಉತ್ತಮವಾದದ್ದನ್ನೇ ಹೊಂದಿರುವನು!

ನಮ್ಮನ್ನು ಪವಿತ್ರ ಮಾಡುವದೇ ದೇವರ ಸಂಕಲ್ಪವಾಗಿರುತ್ತದೆ (4:7, 8). ನಮ್ಮನ್ನು ಮೀಸಲಾಗಿಡಲು ಮತ್ತು ಪರಿಶುದ್ಧಮಾಡಲು, ದೇವರು ಪವಿತ್ರ ಮಾಡುತ್ತಾನೆ. ಮಂದಿರಗಳಲ್ಲಿ ವಿಶೇಷವಾದ ಆಸನಗಳನ್ನು ವಿಶೇಷವಾದ ಜನರಿಗೆ "ಕಾಯ್ದಿರಿಸಿರುತ್ತಾರೆ" ಕ್ರೈಸ್ತರು ಬಹು ಪ್ರಾಮುಖ್ಯವಾದ ದೇವರಿಗೆ "ಕಾಯ್ದಿರಿಸಲ್ಪಟ್ಟವರು."

ಯೇಸು ಕ್ರಿಸ್ತನ ಮೂಲಕ ದೇವರು ನಮ್ಮನ್ನು ಪವಿತ್ರಪಡಿಸಿ, ದೇವರ ಪರಿಶುದ್ಧತೆಯಲ್ಲೂ ಮತ್ತು ಆತನ ಅನ್ಯೋನಯತೆಲ್ಲೂ ಪಾಲುಗಾರರಾಗುವಂತೆ ಮಾಡುವನು. "ನಿಮ್ಮನ್ನು ಕರೆದಾತನು ಪರಿಶುದ್ಧನಾಗಿರುವ ಪ್ರಕಾರವೇ ನೀವೂ ವಿಧೇಯರಿಗೆ ತಕ್ಕಂತೆ ನಿಮ್ಮ ಎಲ್ಲಾ ನಡವಳಿಕೆಯಲ್ಲಿ ಪರಿಶುದ್ಧರಾಗಿರಿ. ನಾನು ಪರಿಶುದ್ಧನಾಗಿರುವದರಿಂದ ನೀವೂ ಪರಿಶುದ್ಧರಾಗಿರಬೇಕು ಎಂದು ಬರೆದದೆಯಲ್ಲಾ" (1 ಪೇತ್ರ 1:15, 16).

ನಾವು ದೇವರೊಂದಿಗಿನ ಅನ್ಯೋನ್ಯತೆಯಲ್ಲಿರುವಾಗ, ದೇವರ ಸಂಬಂಧದಲ್ಲೂ ಲಾಭವನ್ನು ಪಡೆಯುವೆವು. ನಾವು ಕ್ರೈಸ್ತರಾದಾಗ, ದೇವರು ನಮಗೆ ಪವಿತ್ರಾತ್ಮನನ್ನು ನೀಡಿದನು, "ಆತನನ್ನು ವಿಧೇಯರಿಗೆ ಮಾತ್ರ ನೀಡುವನು ..." (ಅಪೊಸ್ತಲರ ಕೃತ್ಯ 5:32). "ಪವಿತ್ರಾತ್ಮನು ನಮ್ಮ ಬಾಧ್ಯತೆಗೆ ಸಂಚಾಕಾರನಾಗಿದ್ದಾನೆ ..." (ಎಫೆಸ 1:14). ನಾವು ಒಂದು ವಸ್ತುವನ್ನು ಕೊಂಡು ಕೊಳ್ಳುವ ಮೊದಲು, ಮುಂಗಡವನ್ನು ನೀಡುವಂತೆ, ನಮಗೆ ನಿತ್ಯತ್ವವನ್ನು ನೀಡುವದಕ್ಕಾಗಿ ದೇವರು ಪವಿತ್ರಾತ್ಮನನ್ನು ಮುಂಗಡವಾಗಿ ನೀಡಿರುವನು.

ನಾವು ಪೂರ್ಣವಾಗಿ ನೀಡಲಾರೆವು ಎಂದು ತಿಳಿಯುವಾಗ, ಅವನು ನಮ್ಮ ಮುಂಗಡವನ್ನು ನಿರಾಕರಿಸುವನು. ಅದೇ ರೀತಿಯಲ್ಲಿ, ಒಬ್ಬ ಬಲಹೀನನಾದ ವ್ಯಕ್ತಿಯು, ಅವನಲ್ಲಿ ಪವಿತ್ರಾತ್ಮನಿಂದ ಉಂಟಾಗುವ ಪರಿಶುದ್ಧತೆಯನ್ನು ನಿರಾಕರಿಸಿದರೆ, ದೇವರು ಅವನ ಭವಿಷ್ಯವನ್ನು ಆಶೀರ್ವದಿಸುವ ವಿಷಯದಲ್ಲಿ ಸಂಶಯಪಡುವವನಾಗಿದ್ದಾನೆ. ಒಬ್ಬನು ತನ್ನನ್ನು ಲೈಂಗಿಕದ ಅನೈತಿಕ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳುವಾಗ, ಅವನು "ದೇವರಿಗೆ, ನೀನು

ನನಗಾಗಿ ಇಟ್ಟಿರುವ ಭವಿಷ್ಯದ ಆಶೀರ್ವಾದದಲ್ಲಿ ನಾನು ಭರವಸವಿಡುವದಿಲ್ಲ" ಎಂದು ಹೇಳು ವವನಾಗಿದ್ದಾನೆ. ದೇವರ ಉದ್ದೇಶಗಳು ಸರಳವಲ್ಲ ಎಂದು ಹೇಳುತ್ತಿರುವನಷ್ಟೆ.

ದೇವರು ನಮ್ಮೊಂದಿಗೆ ಹಂಚಿಕೊಂಡಿರುವ ದೇವರ ಪರಿಶುದ್ಧಾತ್ಮನ ಪಾಠವನ್ನು ನಾವು ಒಪ್ಪಿಕೊಂಡು ದೇವರು ನಮ್ಮಲ್ಲಿ ಆಶೀರ್ವಾದದ ಉದ್ದೇಶಗಳನ್ನು ಹೊಂದಿರುವನು ಎಂದು ಭರವಸವಿಡಬೇಕು. ಇದನ್ನು ಕಾರ್ಯಗತಗೊಳಿಸಲು ಶರೀರದ ಇಚ್ಛೆಗಳಿಂದ ತಪ್ಪಿಸಿಕೊಳ್ಳ ಬೇಕು (2 ತಿಮೊಥೆ 2:22) ಮತ್ತು "ಪರಿಶುದ್ಧತೆಯನ್ನು" ಹಿಂಬಾಲಿಸಬೇಕು, ದೇವರು ನಮ್ಮ ಪರವಾಗಿ ಹೊಂದಿರುವ ಪಾತ್ರವನ್ನು ಒಪ್ಪಿಕೊಂಡು "ಕರ್ತನ ಬರೋಣಕ್ಕಾಗಿ ಹಾರೈಸಬೇಕು" (ಇಬ್ರಿಯ 12:14). ಥೆಸಲೊನೀಕದವರು ಕರ್ತನ ಬರೋಣದಲ್ಲಿ, ಆತನೊಂದಿಗೆ ಒಂದಾಗಲು ಬಯಸಿದನು (1:10). ಈ ಆಶೆಯು ಅವರನ್ನು ದೇವರ ಯೋಜನೆಯಲ್ಲಿ ನಡೆಸಿತು. ಈ ವಿಷಯ ನಮಗೂ ಸಹಾಯಿಸುತ್ತದೆ.

## ಮುಕ್ತಾಯ

ದೇವರ ಹಾಗೆ ಕಾರ್ಯ ನಿರ್ವಹಿಸುವುದು ಅಸಾಧ್ಯ. ಕ್ರಿಸ್ತನಲ್ಲಿರುವವರು ತಮ್ಮ ಪಾಪಕ್ಕಾಗಿ ಮಾನಸಾಂತರಪಟ್ಟರೆ, ದೇವರು ಅವರನ್ನು ಕ್ಷಮಿಸುವನು, ನಾವು ದೈವ ಭಕ್ತಿಯನ್ನು ಹೊಂದಿದವರಾಗಿ, ದೇವರ ಮನೋಭಾವವನ್ನು ಹಾಗೂ ಕಾರ್ಯಗಳನ್ನು ಮಾಡಿ, ಅದರ ಪ್ರತಿಬಿಂಬದಿಂದ, ದೇವರ ಲೋಕದಲ್ಲಿ ಸಹಾಯಕರಾಗಿ ಮುಂದುವರಿಯಬೇಕೆಂದು ಎಚ್ಚರಿಸುತ್ತಾನೆ. ಕಾಮಾಭಿಲಾಶೆಯ ಮೂಲಕ ಸೈತಾನನು ನಮ್ಮನ್ನು ಶೋಧಿಸಿ ದೇವರಿಂದ ಬೇರ್ಪಡಿಸುತ್ತಾನೆ.

ಕಾಮಾಭಿಲಾಶೆಯ ಅಪಾಯವನ್ನು ಅರಿಯಿರಿ, ದೇವರ ಸೇವಕರಾಗಿ ನಿಮ್ಮನ್ನು ಪ್ರತ್ಯೇಕಿಸಿಕೊಳ್ಳಿರಿ. ದೇವರಿಗಾಗಿ ವಿಶೇಷ ವ್ಯಕ್ತಿಯಾಗಿರಿ. ಆತನ ಸೇವೆಗಾಗಿ ನಿಮ್ಮನ್ನು ಆಯ್ಕೆ ಮಾಡಿರುವನು. ಆ ಕೆಲಸದಲ್ಲ ಆತನು ಯಶಶ್ವಿಯನ್ನು ನೀಡುವನು!